ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 3, July-August 2024, Pp. 78-82
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಕನ್ನಡ ರಂಗ ಪಠ್ಯ ಸಾಹಿತ್ಯಿಕ ಅಧ್ಯಯನದ ಸ್ವರೂಪ

ಶ್ರೀ ಶ್ರೀಹರಿ ಧೂಪದ
ಸಂಶೋಧನಾ ವಿದ್ಯಾರ್ಥಿ, ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ (ಕನ್ನಡ ವಿಶ್ವವಿದ್ಯಾಲಯ ಸಂಶೋಧನಾ ಮಾನ್ಯತಾ ಕೇಂದ್ರ), ಬಾಗಲಕೋಟೆ.

Abstract:

"ಅಸ್ತು ವಸ್ತುಷು ಮಾವಾ ಭೂತ್ ಕವಿನಾಚಿ ಸ್ವ ತೋ ರಸಃ" (ಕಾವ್ಯ ಮೀಮಾಂಸೆ – ರಾಜಶೇಖರ)

ಭಾರತೀಯ ಸಾಂಸ್ಕೃತಿಕ ಜಗತ್ತನ್ನು ವಿಸ್ತರಿಸಿದ ಅನೇಕ ಬಗೆಯ ಮೀಮಾಂಸೆ ಮತ್ತು ಸಾಹಿತ್ಯಿಕ ಚರಿತ್ರೆಗಳನ್ನು ನಾವು ಈ ತನಕ ಗಮನಿಸಿದ್ದೇವೆ. ಉದಾಹರಣೆಗೆ ಸಾಹಿತ್ಯ ಮೀಮಾಂಸೆ, ಸಾಹಿತ್ಯ ಚರಿತ್ರೆ, ಜಾನಪದ ಮೀಮಾಂಸೆ, ಜಾನಪದ ಚರಿತ್ರೆ, ನೃತ್ಯ ಮೀಮಾಂಸೆ, ನೃತ್ಯ ಚರಿತ್ರೆ, ಸಂಗೀತ ಮೀಮಾಂಸೆ, ಸಂಗೀತ ಚರಿತ್ರೆ ಹೀಗೆ ಹಲವು ಕವಲುಗಳನ್ನು ಇತಿಹಾಸದುದ್ದಕ್ಕೂ ಕಾಣುತ್ತೇವೆ ಆದರೆ ಕನ್ನಡ ಸಾಂಸ್ಕೃತಿಕ ಜಗತ್ತಿನ ಅವಿಭಾಜ್ಯ ಅಂಗವಾದ ರಂಗಭೂಮಿ ವಸ್ತು ಅಥವಾ ಪಠ್ಯ ಕುರಿತು ಈ ತನಕ ಅತ್ಯಂತ ಉಪೇಕ್ಷೆ ಮತ್ತು ಅಸಡ್ಡೆ ತಲೆದೋರಿದ್ಯಾಕೆ? ಎಂಬುದು ಮಾತ್ರ ಇಂದಿಗೂ ಸೋಜಿಗದ ವಿಚಾರ ಕನ್ನಡ ರಂಗಭೂಮಿಗೆ ಶತಮಾನಗಳ ಇತಿಹಾಸವಿದೆಯಾದರೂ ಈ ತನಕ ಕೇವಲ ನಾಟಕ ರಚನೆಕಾರರು ಮತ್ತು ನಾಟಕ ಕಂಪನಿಗಳ ಕುರಿತು ಒಂದಷ್ಟು ಸುಧೀರ್ಘ ಎನ್ನಬಹುದಾದ ಅಧ್ಯಯನಗಳು ಜರುಗಿವೆಯೇನೊ ನಿಜ. ಆದರೆ ನಾಟಕದ ಜೀವಾಳ ಅಥವಾ ಅದರ ಆತ್ಮದಂತಿರುವ ನಾಟಕ ವಸ್ತುವನ್ನಷ್ಟೇ ಪ್ರಧಾನ ವಿಷಯವನ್ನಾಗಿ ಆಯ್ದು ಅಧ್ಯಯನಗಳು ನಡೆದೇ ಇಲ್ಲ. ಪಾಶ್ಚಾತ್ಯ ಸಾಹಿತ್ಯ ಕ್ಷೇತ್ರ ಹಾಗಲ್ಲ ಅಲ್ಲಿ ನಾಟಕದ ಮುಖೇನವೇ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತು ತನ್ನನ್ನು ತಾನು ತೆರೆದುಕೊಳ್ಳುವುದರಿಂದ ಅಲ್ಲಿ ನಾಟಕ ಮಿಮಾಂಸೆಯಿಂದಲೇ ಎಲ್ಲವೂ ಆರಂಭಗೊಳ್ಳುತ್ತದೆ. ಆದರೆ ಈ ತನಕ ನಾಟಕ ಅಥವಾ ರಂಗಭೂಮಿ ಎನ್ನುವುದನ್ನು ನಾವು ಕೇವಲ ಸಾಂಸ್ಕೃತಿಕ ಆಯಾಮಗಳ ಒಂದು ಭಾಗವನ್ನಾಗಿ ಗಮನಿಸಿದ್ದರಿಂದ ಈ ಬಗೆಯ ಅಧ್ಯಯನದ ಹಿಂಜರಿಕೆ ಉಂಟಾಗಿರಬಹುದೇನೊ.

Keywords: *ಕನ್ನಡ ಸಾಹಿತ್ಯ, ರಂಗಭೂಮಿ, ರಂಗಪಠ್ಯ, ಸಾಹಿತ್ಯಿಕ ಅಧ್ಯಯನ, ನಾಟಕ ಮಿಮಾಂಸೆ.*

ಪೀಠಿಕೆ

ನಾಟಕವೆಂಬುದು ಕೇವಲ ವಾಚಿಕ ಕಾಯಕವಷ್ಟೇ ಆಗಿರದೆ ಏಕಕಾಲಕ್ಕೆ ನೋಡುವ, ಅರಿಯುವ ಅನುಭೂತಿ ಪಡೆಯುವ ಪ್ರಕ್ರಿಯೆಯಾಗಿದ್ದು ಎಲ್ಲ ಸಾಂಸ್ಕೃತಿಕ ಆಯಾಮಗಳ ತಾಯಿ ಎಂದರೂ ತಪ್ಪಾಗಲಿಕ್ಕಿಲ್ಲ. ಅಂತಹ ತಾಯ್ತನವನ್ನು ಅನೇಕ ದಶಕಗಳಿಂದ, ಶತಮಾನಗಳಿಂದ ನಾಟಕವೆಂಬುದು ನೀಡುತ್ತಲೇ ಬಂದಿದೆ ಆದರೆ ಚರಿತ್ರೆ ಮತ್ತು ಮಿಮಾಂಸಕಾರರು ಸಂಸ್ಕೃತ ಅಧ್ಯಯನಗಳ ಪ್ರಭಾವದಿಂದಲೋ ಅಥವಾ ಹೊಸಗನ್ನಡದ ಆರಂಭದ ಕವಿಗಳು ಮಿಮಾಂಸೆ ಎಂದರೆ ಸಾಹಿತ್ಯ ಮತ್ತು ಅದರ ಕುರಿತಾಗಿ ಮಾತ್ರ ಇರಬೇಕೆಂಬ ಸ್ವ–ಹಿತಾಸಕ್ತಿ ಹಾಕಿಕೊಂಡ ಕಟ್ಟಳೆಗಳಿಂದಲೋ ಏನೋ

Please cite this article as: ಶ್ರೀ ಶ್ರೀಹರಿ ಧೂಪದ. (2024). ಕನ್ನಡ ರಂಗ ಪಠ್ಯ ಸಾಹಿತ್ಯಿಕ ಅಧ್ಯಯನದ ಸ್ವರೂಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(3), 78–82

ಇಂದಿಗೂ ಸಾಹಿತ್ಯದ ಹಲವು ಆಯಾಮಗಳಲ್ಲಿ ನಡೆದ ಮಿಮಾಂಸೆಯ ಕಿಂಚಿತ್ ಕೆಲಸವೂ ನಾಟಕದ ಪಠ್ಯವನ್ನು ಕೇಂದ್ರೀಕರಿಸಿ ನಡೆದೇ ಇರುವುದಕ್ಕೆ ಕಾರಣವಿರಬಹುದು. ಈ ಹಿನ್ನೆಲೆಯಲ್ಲಿ ನಾಟಕ ಪಠ್ಯವನ್ನೇ ಮೂಲ ಅಧ್ಯಯನದ ಸರಕನ್ನಾಗಿಸಿಕೊಂಡು ಅಧ್ಯಯನಕ್ಕೆ ತೊಡಗಿದ್ದೇ ಆದರೆ ಭಾರತೀಯ ಅದರಲ್ಲೂ ಕನ್ನಡ ಸಾಹಿತ್ಯದ ಹೊಸ ಬಗೆಯ ಅಧ್ಯಯನದ ಸಾಧ್ಯತೆಗೆ ಎಡೆ ಮಾಡಿ ಕೊಟ್ಟಂತಾಗುತ್ತದೆ ಎಂಬ ಗಟ್ಟಿಯಾದ ಅಭಿಪ್ರಾಯ ನನ್ನದು. ಈ ಹಿನ್ನೆಲೆಯಲ್ಲಿ ಕನ್ನಡ ರಂಗಪಠ್ಯದ ಸ್ವರೂಪವನ್ನು ಅರಿಯುವ ದೃಷ್ಟಿಯಿಂದ ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಗಿನಂತೆ ಅವಸ್ಥಾ ಭೇದಗಳನ್ನಾಗಿ ವಿಂಗಡಿಸಕೊಳ್ಳಬಹುದು ಎಂಬ ಅಭಿಪ್ರಾಯ ನನ್ನದು.

ವಿಭಾಗೀಯ ಕ್ರಮ

ಕನ್ನಡ ರಂಗ ಪಠ್ಯಗಳನ್ನು ಅಧ್ಯಯನದ ಕ್ರಮಗಳನ್ನಾಗಿ ವಿಭಾಗಿಸಿಕೊಂಡು ವಿಸ್ತರಿಸಿಕೊಳ್ಳುವ ಬಗೆಯಲ್ಲಿ ಒಂದಷ್ಟು ತೊಡಕುಗಳು ಕಾಣಿಸಿಗುವ ಸಾಧ್ಯತೆಯನ್ನು ತಳ್ಳಿ ಹಾಕಲಾಗುವುದಿಲ್ಲ. ಏಕೆಂದರೆ ಸಾಹಿತ್ಯ ಕ್ಷೇತ್ರದಂತೆ ರಂಗ ಪಠ್ಯ ಚರಿತ್ರೆಗೆ ಏಕಮುಖವೆಂಬುದಿಲ್ಲ. ಆದರೂ ಪ್ರಯತ್ನದ ಮೂಲಕ ಅದನ್ನು ಈ ಕೆಳಗಿನಂತೆ ಸರಳೀಕರಿಸಿಕೊಳ್ಳು ಸಣ್ಣ ಪ್ರಯತ್ನಕ್ಕೆ ಮುಂದಾಗಿದ್ದೇನೆ. ನಾಟಕ ಅಥವಾ ರಂಗಭೂಮಿಯನ್ನು ಆರಂಭದಲ್ಲಿ ಪ್ರಭಾವಿಸಿ, ಪ್ರೇರಿಪಿಸಿದ ಅಂಶಗಳ ಮೂಲಕ ವಿಭಾಗಿಸಿಕೊಳ್ಳುವುದು ಸೂಕ್ತ ಎಂಬ ಊಹೆ ನನ್ನದು.

1. ಮರಾಠಿ ರಂಗ ಪಠ್ಯ

ಮರಾಠಿ ನಾಟಕಗಳು ಕನ್ನಡ ನಾಟಕಗಳ ಮುಂಗೋಳಿ ಇದ್ದ ಹಾಗೆ. ಬಹುತೇಕ ಆಧುನಿಕ ಕನ್ನಡ ರಂಗಭೂಮಿ ಆರಂಭಗೊಂಡಿರುವುದೇ ಮರಾಠಿ ನಾಟಕಗಳ ಪ್ರಭಾವದಿಂದ. ಈ ಕಾರಣಕ್ಕಾಗಿಯೇ ಕನ್ನಡ ನಾಟಕಗಳು ಹೊಸ ಬಗೆಯ ಅಭಿವ್ಯಕ್ತಿ ವಿಧಾನವನ್ನು ಪಡೆದವು. ಉದಾಹರಣೆಗೆ 1843ರ ಸುಮಾರಿಗೆ ಮರಾಠಿಯ 'ವಿಷ್ಣುದಾಸ ಭಾವೆ'ಯವರ ಸೀತಾ ಸ್ವಯಂವರ ಮರಾಠಿ ನಾಟಕಗಳಲ್ಲಿಯೇ ಮೊದಲು ಎಂಬುದಕ್ಕೆ ಪಾತ್ರವಾಗಿದ್ದು ಸಾಂಗ್ಲಿಯಲ್ಲಿ ಪ್ರದರ್ಶನಗೊಳ್ಳುತ್ತದೆ. ಹೀಗಾಗಿ ಕನ್ನಡ ಮತ್ತು ಮರಾಠಿ ನಾಟಕಗಳು ಆರಂಭಿಕ ಕೊಡುಕೊಳ್ಳುವಿಕೆಯೊಂದಿಗೆ ಆರಂಭವಾಗಿ ನಂತರ ಪ್ರತ್ಯೇಕ ಭಾಷಾ ಪ್ರಯೋಗಗಳಾಗಿ ಮಾರ್ಪಟ್ಟಿರುವುದನ್ನು ನಾವು ಗಮನಿಸುತ್ತೇವೆ. ಭಾಷೆ ಬೇರೆಯಾದರೂ ನಾಟಕದ ಕಥಾವಸ್ತುವಿನ ಆಯ್ಕೆಯಲ್ಲಿ ಭಿನ್ನತೆಯನ್ನು ಕಾಣುತ್ತೇವೆ. ಈ ಹಿನ್ನಲೆಯಲ್ಲಿ ಪಠ್ಯ ವಿಶ್ಲೇಷಣೆ ಕಾರ್ಯ ಇಲ್ಲಿ ಮುಖ್ಯವಾಗುತ್ತದೆ. ಮರಾಠಿ ನಾಟಕಗಳನ್ನೇ ನೇರವಾಗಿ ಅನುವಾದಿಸಿ ಕನ್ನಡದಲ್ಲಿ ಪ್ರದರ್ಶನಗೊಳಿಸಿದ ವೃತ್ತಿ ರಂಗಭೂಮಿ ಪ್ರಯೋಗಗಳು ಅನೇಕವಿದ್ದು, ಅವುಗಳ ಸಮಸ್ತ ಅಧ್ಯಯನದ ಅಗತ್ಯತೆಯನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

2. ಬಂಗಾಲಿ ರಂಗ ಪಠ್ಯ

ಆಧುನಿಕ ಕನ್ನಡ ಸಾಹಿತ್ಯಕ್ಕೆ ಬಂಗಾಳಿ ಭಾಷೆಯ ಪ್ರಭಾವದಷ್ಟೇ ಪ್ರೇರಣೆಯಾಗಿ ಬಂದದ್ದು ನಾಟಕ ಕ್ಷೇತ್ರಗಳೂ ಸಹ. ಬಂಗಾಳಿ ಭಾಷೆಯ ಮೂಲಕವೇ ಕನ್ನಡಕ್ಕೆ ಷೇಕ್ಸಪೀಯರ್‌ನ ನಾಟಕಗಳು ಕನ್ನಡಕ್ಕೂ ತರ್ಜುಮೆಗೊಂಡು ಪ್ರದರ್ಶಿಸಲ್ಪಟ್ಟಿದ್ದು, ಕನ್ನಡ ಮತ್ತು ಬಂಗಾಳಿ ಭಾಷಾ ಬಾಂಧವ್ಯದ ಜೊತೆ ನಾಟಕ ಪಠ್ಯದ ಕುರಿತೂ ಬೆಳೆದ ಅನನ್ಯತೆಯನ್ನು ಮಿಮಾಂಸಾತ್ಮಕವಾಗಿ ಅಧ್ಯಯನ ಕೈಗೊಳ್ಳಬಹುದಾದ ಸಾಧ್ಯತೆಯನ್ನು ಒತ್ತಿ ಹೇಳಬಹುದಾಗಿದೆ.

3. ಮೈಸೂರು ಸಂಸ್ಥಾನದ ರಂಗಪಠ್ಯ

ಮರಾಠಿ ಮತ್ತು ಬಂಗಾಳಿ ನಾಟಕಗಳ ಬೆಳವಣಿಗೆ ಜೊತೆಜೊತೆಗೆ ಮೈಸೂರು ಸಂಸ್ಥಾನ ರಂಗಪಠ್ಯ ರಚನೆ ಹಾಗೂ ನಾಟಕ ಕಂಪನಿಗಳ ಹುಟ್ಟು ಬೆಳವಣಿಗೆಗೆ ತನ್ನದೇ ಆದ ಕೊಡುಗೆ ನೀಡಿದೆ. ಸಿಂಗರಾರ್ಯನ ಮಿತ್ರವಿಂದಾ ಗೋವಿಂದ ನಾಟಕದಿಂದ ಆರಂಭಗೊಂಡು ಅನೇಕ ನಾಟಕ ರಚನೆಕಾರರನ್ನು ಕರೆಯಿಸಿ ಅವರಿಗೆ ಆಶ್ರಯ ನೀಡಿ,

ನಾಟಕ ರಚನೆಗೆ ಪ್ರೋತ್ಸಾಹ ನೀಡಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ಇಂಥ ಸಮಯದಲ್ಲಿ ಮೂಡಿಬಂದ ರಂಗಪಠ್ಯದ ವಿಶಿಷ್ಟತೆಯನ್ನು ವಿಶೇಷವಾಗಿ ಅರಿಯುವುದೂ ಕೂಡಾ ಇಂದಿನ ಸಾಹಿತ್ಯದ ಅಗತ್ಯತೆಗಳಲ್ಲಿ ಒಂದಾಗಿದೆ ಎನ್ನಬಹುದು.

4. ಪಾಶ್ಚಾತ್ಯ ರಂಗ ಪಠ್ಯ

ಭಾರತೀಯ ನಾಟಕಗಳೂ ಸೇರಿದಂತೆ ಕನ್ನಡ ನಾಟಕಗಳು ಪಾಶ್ಚಾತ್ಯ ನಾಟಕಗಳ ಪ್ರಭಾವದಿಂದ ಒಂದು ಬಗೆಯ ಹೊಸ ಜನ್ಮ ತಾಳಿದುದು ಎಂದರೂ ತಪ್ಪಾಗಲಿಕ್ಕಿಲ್ಲ. ಹಾಗೆ ನೋಡಿದರೆ ಇಂದು ನಾವು ಗ್ರಹಿಸುತ್ತಿರುವ ರಂಗಭೂಮಿ ಎಂಬುದರ ಒಟ್ಟು ಪರಿಕಲ್ಪನೆ ದೊರಕಿದ್ದೆ ನಮಗೆ ಪಾಶ್ಚಾತ್ಯ ನಾಟಕಕಾರರ ಪ್ರಭಾವದಿಂದ ಈ ಕಾರಣಕ್ಕೆ ಆರಂಭದಲ್ಲಿ ಪಾಶ್ಚಾತ್ಯರ ಅನುಕರಣೆಯ ನಾಟಕ ಪಠ್ಯವೇ ನಮಗೆ ನಮ್ಮ ನಾಟಕ ಪಠ್ಯದ ಭಾಗವಾದಂತೆ ಗೋಚರಿಸುತ್ತದೆ. ಉದಾ: ಬಿಎಂಶ್ರೀ ಅವರ ಅಶ್ವತ್ಥಾಮನ್, ಕುವೆಂಪು ಅವರ ಬೆರಳ್ಗೆ ಕೊರಳ್ ಮುಂತಾದವುಗಳನ್ನು ಸಧ್ಯಕ್ಕೆ ಗಮನಕ್ಕೆ ತಂದುಕೊಳ್ಳಬಹುದಾಗಿದೆ.

ಇದರಷ್ಟೇ ಮುಖ್ಯವಾಗಿ

1. **ಪೌರಾಣಿಕ ರಂಗಪಠ್ಯ:** ಇದೇ ರೀತಿ ಕನ್ನಡ ನಾಟಕಗಳ ಆರಂಭವನ್ನು ಮಹಾಕಾವ್ಯಗಳ ಬಿಡಿ ಭಾಗಗಳನ್ನೊ, ಅಥವಾ ಪೂರ್ಣಭಾಗವನ್ನೋ ಆವರಿಸಿ ರಚಿಸಲ್ಪಟ್ಟ ನಾಟಕ ವಸ್ತುವನ್ನು ಕಾಣುತ್ತೇವೆ.

2. ಐತಿಹಾಸಿಕ ರಂಗಪಠ್ಯ: ಪೌರಾಣಿಕದಷ್ಟೇ ಪ್ರಭಾವಶಾಲಿಯಾದ ಕನ್ನಡ ನಾಟಕದ ವಸ್ತು ಮತ್ತೊಂದು ಮಗ್ಗುಲೆಂದರೆ ಐತಿಹಾಸಿಕ ನಾಟಕಗಳದ್ದು.

3. ಜಾನಪದ ರಂಗ ಪಠ್ಯ: ಇನ್ನು ಎಲ್ಲ ಅಭಿವ್ಯಕ್ತಿ ಮಾಧ್ಯಮಗಳ ಮೂಲವಾದ ಜಾನಪದ ನಾಟಕ ಕ್ಷೇತ್ರವನ್ನೂ ಮೊದಲ್ಗೊಳ್ಳುತ್ತದೆ. ಜನಪದ ರಂಗಭೂಮಿಗೆ ಅದರದ್ದೇ ಆದ ರಂಗಪಠ್ಯವಿದೆ. ಆ ಪಠ್ಯ ವಸ್ತುವಿನ ಅಭಿವ್ಯಕ್ತಿಗಾಗಿಯೇ ಜನಪದ ರಂಗಭೂಮಿಯ ಅನೇಕ ಮಾರ್ಗಗಳನ್ನು ಅದು ರೂಪಿಸಿಕೊಂಡಿದ್ದನ್ನು ಇಲ್ಲಿ ಗಮನಿಸಬಹುದಾಗಿದೆ.

4. ಸ್ವಾತಂತ್ರ್ಯ ಹೋರಾಟದ ರಂಗಪಠ್ಯ

ಕನ್ನಡ ನಾಟಕ ಪರಂಪರೆಗೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸ್ವಾತಂತ್ರ ಹೋರಾಟಗಾರರನ್ನೇ ಮುಖ್ಯ ಕಥಾ ವಸ್ತುವನ್ನಾಗಿ ಉಳ್ಳ ನಾಟಕಗಳು ಅನೇಕ ಅವುಗಳ ಅಭಿವ್ಯಕ್ತಿ ಕ್ರಮವನ್ನು ಅಧ್ಯಯನ ಮಾಡಬೇಕಾದ ಸಾಧ್ಯತೆ ದಟ್ಟವಾಗಿದೆ.

5. ಸಾಮಾಜಿಕ ರಂಗಪಠ್ಯ

6. ಬೀದಿ ನಾಟಕಗಳ ಪಠ್ಯ

ಅಲ್ಲದೆ ಸಾಮಾಜಿಕ ನಾಟಕದ ವಿವಿಧ ಆಯಾಮಗಳ ಮುಖ್ಯ ಭೂಮಿಕೆಗಳಾದ ಸಾಮಾಜಿಕ ನಾಟಕಗಳ ಕಥಾವಸ್ತು ಹಾಗೂ ಬೀದಿ ನಾಟಕಗಳ ಮೂಲಕ ಜಾಗೃತಿಗೆ ಕಾರಣೀಭೂತವಾದ ಕಥಾ ವಸ್ತುಗಳ ಪ್ರತ್ಯೇಕ ಅಧ್ಯಯನದಿಂದಲೂ ಸಾಹಿತ್ಯದ ಹೊಸ ಮಾರ್ಗವನ್ನು ವಿಸ್ತರಿಸಿಕೊಳ್ಳಬಹುದಾದ ಮಾರ್ಗವನ್ನು ತಿಳಿಯಬಹುದು.

7. **ವೃತ್ತಿ ಕಂಪನಿ ನಾಟಕಗಳ ಪಠ್ಯ**

ವೃತ್ತಿ ನಾಟಕಗಳ ರಚನಾ ಶೈಲಿ ಮತ್ತು ಅಭಿವ್ಯಕ್ತಿ ಕ್ರಮಕ್ಕೆ ಕನ್ನಡ ರಂಗ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವಿದೆ. 70ರ ದಶಕವನ್ನು ಕನ್ನಡ ವೃತ್ತಿ ರಂಗಭೂಮಿಯ ಸುವರ್ಣಯುಗವೆಂದು ಚರಿತ್ರೆಕಾರರು ಗುರುತಿಸುತ್ತಾರೆ. ಅಷ್ಟರ ಮಟ್ಟಿಗೆ ವೃತ್ತಿ ನಾಟಕಗಳು ತಮ್ಮ ಅಸ್ತಿತ್ವವನ್ನು ಕನ್ನಡ ನೆಲದಲ್ಲಿ ಸ್ಥಾಪಿಸಿವೆ. ಹೀಗಾಗಿ ಮಹತ್ವದ ವೃತ್ತಿ ನಾಟಕಗಳ ಪಠ್ಯವನ್ನು ಕೇಂದ್ರೀಕರಿಸಿ ಅಧ್ಯಯನ ಕೈಗೊಳ್ಳಬಹುದಾಗಿದೆ.

ಅ) ಹವ್ಯಾಸಿ ನಾಟಕಗಳ ಪಠ್ಯ

ವೃತ್ತಿ ನಾಟಕಗಳ ಪ್ರಭಾವದಿಂದಲೇ ಹವ್ಯಾಸಿ ನಾಟಕಗಳು ಕನ್ನಡತನದ ಅಭಿವ್ಯಕ್ತಿಯ ವಿಶಿಷ್ಟ ಮಾರ್ಗವಾಗಿದ್ದು, ವೃತ್ತಿ ನಾಟಕಗಳ ಪಠ್ಯಕ್ಕಿಂತ ಅಗತ್ಯಕ್ಕೆ ಅನುಗುಣವಾಗಿ ನಾಟಕ ಪಠ್ಯ ರಚನೆಯಾಗುವುದನ್ನು ಇಲ್ಲಿ ಗಮನಿಸುತ್ತೇವೆ.

ಆ) ಬಾನುಲಿ ನಾಟಕಗಳ ಪಠ್ಯ

ನಮ್ಮಲ್ಲಿ ರೇಡಿಯೋ ಅಥವಾ ಬಾನುಲಿ ನಾಟಕಕಾರರು ಮತ್ತು ನಾಟಕಗಳ ಒಂದು ದೊಡ್ಡ ಪರಂಪರೆಯೇ ಇದೆ. ಇಂತಿಷ್ಟೇ ಸಮಯಕ್ಕೆ

ಅನುಗುಣವಾಗಿ ಇಂಥದ್ದೇ ವಿಷಯವನ್ನು ಅಳವಡಿಸಿ ರಚಿಸಲ್ಪಟ್ಟ ರಂಗ ಪಠ್ಯಗಳ ಅಧ್ಯಯನವನ್ನು ಈ ವಿಭಾಗದಲ್ಲಿ ಕಂಡುಕೊಳ್ಳಬಹುದಾಗಿದೆ.

ಇ) ಏಕಾಂಕ ನಾಟಕಗಳ ಪಠ್ಯ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಏಕಾಂಕ ನಾಟಕಗಳು ಎಂಬ ಪರಿಕಲ್ಪನೆಯೇ ವಿಶಿಷ್ಟವಾದುದು ಇಲ್ಲಿಯೂ ಸಹ ಸಮಯ ಮತ್ತು ಪರಿಕಲ್ಪನೆಯನ್ನೇ ಮೂಲ ಉದ್ದೇಶವನ್ನಿಟ್ಟುಕೊಂಡು ರಚಿಸಲ್ಪಟ್ಟ ರಂಗ ಪಠ್ಯರಚನೆಯಾಗಿದ್ದು ಈ ಬಗೆಯ ಅಧ್ಯಯನದ ಅಗತ್ಯತೆಯನ್ನು ಮನಗಾನಬಹುದಾಗಿದೆ. ಇವಿಷ್ಟೇ ಅಲ್ಲದೆ ಇನ್ನು ಅನೇಕ ಬಗೆಯಾಗಿ ವಿಂಗಡಿಸಿ ಅಧ್ಯಯನಕ್ಕೆ ಒಳಗು ಮಾಡಬಹುದು ಕೆಲ ಉದಾಹರಣೆಗಳನ್ನು ಕೆಳಗೆ ಉಲ್ಲೇಖಿಸಿದ್ದೇನಷ್ಟೇ.

ಹೊಸಗನ್ನಡ ಸಾಹಿತ್ಯ ಅಧ್ಯಯನ ಕ್ರಮಗಳಿಗೆ ಅನುಗುಣವಾಗಿ

ಹೊಸಗನ್ನಡ ಸಾಹಿತ್ಯದ ಘಟ್ಟಗಳು ಎಂದು ನಾವು ಯಾವನ್ನು ಗುರುತಿಸುತ್ತೇವೋ ಅವುಗಳ ಆಧಾರದ ಮೇಲೆಯೂ ಸಾಹಿತ್ಯದ ಜೊತೆಜೊತೆಗೆ ನಾಟಕಗಳು ಒಡಮೂಡಿದ್ದನ್ನು ನಾವು ಕಾಣುತ್ತೇವೆ. ನವೋದಯ ಕಾಲಘಟ್ಟದ ಬಿ.ಎಂ.ಶ್ರೀ ಕುವೆಂಪು, ಬೇಂದ್ರೆ ಅವರುಗಳಿಂದ ಆರಂಭಗೊಂಡು ಪ್ರತಿ ತೀರಾ ಇತ್ತೀಚಿನ ನಟರಾಜ ಬೂದಾಳು, ನಟರಾಜ ಹುಳಿಯಾರ ಹಾಗೂ ಹೊಸ ತಲೆಮಾರಿನ ಇನ್ನೂ ಅನೇಕ ರಂಗಕರ್ಮಿಗಳ ವರೆಗೂ ನಾಟಕಕ್ಕಾಗಿಯೇ ಹೊಸ ಬಗೆಯ ಪಠ್ಯ ಸಿದ್ಧ ಪಡಿಸಿಕೊಮಡ ನಾಟಕಗಳನ್ನು ಕಾಣುತ್ತಲೇ ಇದ್ದೇವೆ. ಈ ಹಿನ್ನೆಲೆಯಲ್ಲಿ ಅಧ್ಯಯನದ ಸಾಧ್ಯತೆಯನ್ನೂ ಗುರುತಿಸಬಹುದಾಗಿದೆ.

1. ನವೋದಯ ಕಾಲಘಟ್ಟದ ರಂಗ ಪಠ್ಯ
2. ನವ್ಯ ಕಾಲ ಘಟ್ಟದ ರಂಗ ಪಠ್ಯ
3. ಪ್ರಗತಿಶೀಲ ಘಟ್ಟದ ರಂಗ ಪಠ್ಯ
4. ದಲಿತ–ಬಂಡಾಯ ಕಾಲದ ರಂಗ ಪಠ್ಯ ಹಾಗೂ
5. ಇತ್ತೀಚಿನ ನಾಟಕ ಪಠ್ಯ

ಇದರ ಜೊತೆಜೊತೆಗೆ

ಧರ್ಮದ ವಸ್ತು ಆಧರಿಸಿಯೂ ವಿಭಾಗಿಸಿ ಅಧ್ಯಯನ ಕೈಗೊಳ್ಳಬಹುದಾಗಿದೆ.

ಧರ್ಮ ಮತ್ತು ಸಾಹಿತ್ಯ ಪರಸ್ಪರ ಕೊಡುಕೊಳ್ಳುವಿಕೆಯ ಸಂಬಂಧಿಗಳು. ಹೀಗಾಗಿ ಧರ್ಮ ಸ್ಥಾಪನೆ, ಧರ್ಮ ಚಿಂತನೆ, ಧರ್ಮ ಪ್ರಚಾರದಂತಹ ಕಾರ್ಯದ ಮೂಲ ಉದ್ದೇಶಕ್ಕಾಗಿಯೂ ರಚನೆಗೊಂಡ ನಾಟಕ ಪಠ್ಯಗಳನ್ನು ಪ್ರತ್ಯೇಕವಾಗಿ ಗಮನಿಸಿ ಅಧ್ಯಯನ ಕೈಗೊಳ್ಳಬಹುದಾಗಿದೆ. ಈ ಬಗೆಯ ಅನೇಕ ಪಠ್ಯಗಳನ್ನು ಗಮನಿಸಲು ಬಹುದೊಡ್ಡ ಅಧ್ಯಯನ ಸಾಮಗ್ರಿಯೂ ನಮಗೆ ದೊರೆಯಲಿದೆ. ಉದಾಹರಣೆಗೆ ಹಿಂದೂ ಧರ್ಮ ಮುಖ್ಯ ಭೂಮಿಕೆಯ ಕಥಾ ವಸ್ತುಗಳಾದ ಮಹಾಭಾರತ, ರಾಮಾಯಣ, ವೇದೋಪನಿಷದ್‌ನ ಮುಖ್ಯ ಸಂಗತಿಗಳನ್ನು ಆಯ್ದ ನಾಟಕಗಳಾದರೆ, ಜೈನ ಧರ್ಮದ ಯತಿಗಳ ಕುರಿತ ಅನೇಕ ನಾಟಕಗಳೂ ಸಹ ಕನ್ನಡದಲ್ಲಿ ಬಂದಿವೆ ಇನ್ನು ಬೌದ್ಧ ನಾಟಕಗಳ ರಚನೆಕಾರರ ಒಂದು ಪಡೆಯೇ ಕನ್ನಡದಲ್ಲಿದೆ ಉದಾಹರಣೆಗೆ ಪ್ರಭುಶಂಕರ, ನಟರಾಜ ಬೂದಾಳು, ಬುದ್ದಣ್ಣ ಹಿಂಗಮಿರೆ ಇತರರು. ಇಸ್ಲಾಂ ನಾಟಕ ಪಠ್ಯವೂ ನಮ್ಮಲ್ಲಿ ಬೆಳೆದು ಬಂದಿದ್ದು, ಗಿರೀಶ್ ಕಾರ್ನಾಡ, ಚಂದ್ರಶೇಖರ ಕಂಬಾರ, ಬೋಳುವಾರು ಮಹಮದ್ ಕುಂಯಿ ಅಲ್ಲದೆ ಕ್ರೈಸ್ತ ನಾಟಕಗಳ ಪ್ರಯೋಗಗಳು ಕೆಲವು ಕಡೆ ಪ್ರಯೋಗ ಕಂಡಿದ್ದು, ಈ ನಿಟ್ಟಿನಲ್ಲಿ ನಡೆಯುತ್ತಿರುವ ಪ್ರಯೋಗಗಳ ಕುರಿತು ಅರಿಯ ಬಹುದಾಗಿದೆ.

1. ಹಿಂದೂ ಧರ್ಮಾಧಾರಿತ ಪಠ್ಯ
2. ಜೈನ ಧರ್ಮಾಧಾರಿತ ಪಠ್ಯ
3. ಬೌದ್ಧ ಧರ್ಮಾಧಾರಿತ ಪಠ್ಯ
4. ಇಸ್ಲಾಂ ಧರ್ಮಾಧಾರಿತ ಪಠ್ಯ
5. ಕ್ರೈಸ್ತಾ ಧರ್ಮಾಧಾರಿತ ಪಠ್ಯ

ಹೀಗೆ ಸಾಹಿತ್ಯ ಅಧ್ಯಯನದ ಹೊಸ ಸಾಧ್ಯತೆಗಳನ್ನು ಈ ಮೇಲಿನಂತೆ ವಿಭಾಗ ಕ್ರಮ ಮಾಡಿಕೊಂಡು ಅಧ್ಯಯನ ಕೈಗೊಳ್ಳುವುದರಿಂದ ಅಧ್ಯಯನ ವಿಧಾನಗಳನ್ನು ಹಾಗೂ ಸಾಂಸ್ಕೃತಿಕ ಕ್ಷೇತ್ರದಿಂದ ಮರೆತು ಹೋಗಬಹುದಾದ ಅನೇಕ ಸಂಗತಿಗಳನ್ನು ಮುಂದಿನ ತಲೆಮಾರಿಗೆ ಕಟ್ಟಿಕೊಡಲು ಸಾಧ್ಯವಾಗಲಿದೆ ಎಂಬ ಹಂಬಲ ನನ್ನದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಂಚಲನ ಮೂಡಿಸಿದ ಅನೇಕ ಪಾದ್ರಿಗಳು ಕ್ರೈಸ್ತ ನಾಟಕಗಳನ್ನು ಕನ್ನಡಕ್ಕೆ ಆರಂಭದಲ್ಲಿ ಅನುವಾದಿಸುವುದರ ಜೊತೆಗೆ ಕನ್ನಡ ನಾಟಕ ಪಠ್ಯಕ್ಕೆ ದುರಂತ ನಾಟಕಗಳ ಪರಿಚಯವನ್ನು ಮಾಡಿದ ಒಂದು ಉದಾಹರಣೆಯನ್ನು ಮಾತ್ರ ಇಲ್ಲಿ ಉದಾಹರಿಸಿದರೆ ಸಾಕಾದೀತು ಅಲ್ಲದೆ ಕನ್ನಡ ನೆಲದ ಅನೇಕ ಕಡೆ ಕ್ರೈಸ್ ನಾಟಕಗಳ ಒಂದಷ್ಟು ಪ್ರಯೋಗಗಳು ಅಲ್ಲಲ್ಲಿ ನಡೆಯುತ್ತಿರುವುದನ್ನು ಉದಾಹರಣೆಗಳನ್ನು ಕಾಣಬಹುದು.

ಹೀಗೆ ಈ ವರೆಗೆ ನಡೆದು ಬಂದ ಒಟ್ಟು ನಾಟಕದ ವಸ್ತು ಅಥವಾ ರಂಗ ಪಠ್ಯದ ಚರಿತ್ರೆ ಮತ್ತು ಮಿಮಾಂಸೆಯನ್ನು ಹೊಸ ಬಗೆಯಲ್ಲಿ ಅರಿತುಕೊಳ್ಳುವ ಮೂಲಕ ಸಾಹಿತ್ಯದ ಹೊಸ ಸಾಧ್ಯತೆಯನ್ನು ಹುಟ್ಟು ಹಾಕಿಕೊಂಡು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರವನ್ನು ವಿಸ್ತರಿಸಿಕೊಳ್ಳಬಹುದಾಗಿದೆ.

ಪರಾಮರ್ಶನ ಗ್ರಂಥಗಳು

- ಗಿರಡ್ಡಿ ಗೋವಿಂದರಾಜ. *ಕನ್ನಡ ನಾಟಕ ಮತ್ತು ರಂಗಭೂಮಿ.*
- ಮುಗಳಿ ರಂ.ಶ್ರೀ. (2014). *ಕನ್ನಡ ಸಾಹಿತ್ಯ ಚರಿತ್ರೆ.* ಗೀತಾ ಬುಕ್‌ಹೌಸ್.
- ರಾಮ್‌ನಾಥ್, ಎಚ್.ಕೆ. (1990). *ಕನ್ನಡ ರಂಗಭೂಮಿ ವಿಕಾಸ.* ಸದ್ಗುರು ಪ್ರಿಂಟರ್ಸ್.
- ಶ್ರೀಕಂಠಯ್ಯ, ತೀ.ನಂ. (1953). *ಭಾರತೀಯ ಕಾವ್ಯ ಮಿಮಾಂಸೆ.* ಮೈಸೂರು ವಿಶ್ವವಿದ್ಯಾನಿಲಯ.